**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರು ಬೆಂಗಳೂರು ನಗರ ತಿಗಳರ ಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮದ ಸರ್ವೆ ನಂ-79ರಲ್ಲಿ 15 ಎಕರೆ 12 ಗುಂಟೆ ಮತ್ತು ಹೊಂಗಸಂದ್ರ ಗ್ರಾಮದ ಸರ್ವೆ ನಂ. 33 ರಲ್ಲಿ 16 ಎಕರೆ 25 ಗುಂಟೆ ದೇವಸ್ಥಾನಕ್ಕೆ ಸೇರಿದ ಭೂಮಿಯನ್ನು ಅತಿಕ್ರಮವಾಗಿ ಒತ್ತುವರಿಯಾಗಿದ್ದು, ಸದರಿ ಜಾಗವನ್ನು ಇಲಾಖೆಯ ವಶಕ್ಕೆ ಪಡೆಯಲು ಇಲಾಖೆಯು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಸದರಿ ಜಾಗದಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿ ಅಕ್ರಮವಾಗಿ ನಿರ್ಮಿಸಿರುವ ಮನೆಗಳಿಗೆ/ಕಟ್ಟಡಗಳಿಗೆ ಬಿ.ಬಿ.ಎಂ.ಪಿ ಹಾಗೂ ಇತರ ಸರ್ಕಾರದ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಇಲಾಖೆಗಳ ವತಿಯಿಂದ ಸೌಲಭ್ಯಗಳನ್ನು ಕಲ್ಪಿಸಿರುವುದು ಕಾನೂನಿಗೆ ವಿರುದ್ಧ ಹಾಗೂ ಮುಜರಾಯಿ ಇಲಾಖೆಯ ಜಾಗವನ್ನು ಒತ್ತುವರಿ ಮಾಡಿದವರಿಗೆ ಸಹಾಯ ಮಾಡಿದಂತಾಗಿದೆ. ಅಕ್ರಮಗಳಿಗೆ ಸಹಕರಿಸಿದ ಎಷ್ಟು ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳುವ ಕುರಿತು ಹಾಗೂ ಖಾಲಿ ಇರುವ 7 ಎಕರೆಗೂ ಹೆಚ್ಚು ಜಾಗಕ್ಕೆ ಕಾಂಪೌಂಡು ಹಾಕುವ ಕುರಿತು ನಿಯಮ 330 ರ ಅನ್ವಯ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ" ಎಂದು ನಿಯಮ 330 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ:-**

**ಉತ್ತರ:-**

- ಬೆಂಗಳೂರು ನಗರ ಹಲಸೂರು ಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯವು "ಬಿ" ಪ್ರವರ್ಗದ ದೇವಾಲಯವಾಗಿರುತ್ತದೆ.

- **ಶ್ರೀಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ಜಮೀನಿನ ವಿವರ ಈ ಕೆಳಕಂಡಂತೆ ಇರುತ್ತದೆ.**

| ಕ್ರ. ಸಂ. | ವಿವರ | ಸರ್ವೆ ನಂ. ವಿಸ್ತೀರ್ಣ | ಎ/ಗು |
|---|---|---|---|
| 1 | ನೀಲಸಂದ್ರ ಗ್ರಾಮ | 79 | 15-12 |
| 2 | ಹೊಂಗಸಂದ್ರ ಗ್ರಾಮ | 33 | 16-25 |
| | | **ಒಟ್ಟು** | **31-37** |

ಷರಾ:-

1. ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನೀಲಸಂದ್ರ ಗ್ರಾಮದ ಸರ್ವೆ ನಂ.79ರ ವಿಸ್ತೀರ್ಣ 15-12 ಎಕರೆ-ಗುಂಟೆ ಜಮೀನು ಶ್ರೀ ಧರ್ಮರಾಯ ಸ್ವಾಮಿ ದೇವಾಲಯದ ಇನಾಂ ಜಮೀನಾಗಿದ್ದು, ದೇವಾಲಯದ ಹೆಸರಿಗೆ ಖಾತೆ ಆಗಿರುತ್ತದೆ ಹಾಗೂ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ (ಕರ್ನಾಟಕ ರಾಜ್ಯ ಪತ್ರದ ಪ್ರತಿ ಲಗತ್ತಿಸಿದೆ).

2. ಹೊಂಗಸಂದ್ರ ಗ್ರಾಮದ ಸರ್ವೆ ನಂ.33 ರಲ್ಲಿನ 16-25 ಎಕರೆ-ಗುಂಟೆ ಜಮೀನಿನ ಅಧಿಬೋಗದಾರಿಕೆಯ ಹಕ್ಕನ್ನು ಶ್ರೀ ಕೆ.ಪಿ. ಗೋವಿಂದರೆಡ್ಡಿ ಹಾಗೂ ಇತರರಿಗೆ ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ ಇವರ ಆದೇಶ ಸಂಖ್ಯೆ: ಐಎನ್‌ಎ 182/1997-98 ದಿನಾಂಕ:21-04-2001ರಲ್ಲಿ ಮಂಜೂರು ಮಾಡಿದ್ದು, ಸದರಿ ಆದೇಶವನ್ನು ಪ್ರಶ್ನಿಸಿ ಸಹಾಯಕ ಆಯುಕ್ತರವರು ಮಾನ್ಯ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಅಪೀಲು ಸಂಖ್ಯೆ:572/2004 ದಾಖಲಿಸಿದ್ದು, ಸದರಿ ಪ್ರಕರಣವನ್ನು ನ್ಯಾಯಾಲಯವು ದಿನಾಂಕ:28-04-2014 ರಂದು ವಜಾಗೊಳಿಸಿರುತ್ತದೆ. ಸದರಿ ಆದೇಶಗಳನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂಪಿ:28866/2014ರಂತೆ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುತ್ತದೆ.

- ಬೆಂಗಳೂರು ಹಲಸೂರು ಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಸೇರಿದ ಸ್ವತ್ತುಗಳಾದ ಬೆಂಗಳೂರು ಉತ್ತರ ತಾಲ್ಲೂಕು ನೀಲಸಂದ್ರ ಗ್ರಾಮದ ಸರ್ವೆ ನಂ. 79 ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹೊಂಗಸಂದ್ರ ಗ್ರಾಮದ ಸರ್ವೆ ನಂ.33ರ ಬಗ್ಗೆ 2017 ರಿಂದ ಇಲ್ಲಿಯವರೆಗೂ ಸದನದಲ್ಲಿ ಹಲವು ನಿಯಮಗಳಡಿಯಲ್ಲಿ ಪ್ರಸ್ತಾಪಿಸಿದ್ದು, ಸರ್ಕಾರವು ಉತ್ತರಿಸಿ ಆಶ್ವಾಸನೆ ನೀಡಿದ ಪ್ರಕಾರ ಕೈಗೊಂಡ ಕ್ರಮದ ವಿವರ ಈ ಕೆಳಕಂಡಂತೆ ಇದೆ.

- ಬೆಂಗಳೂರು ಉತ್ತರ ತಾಲ್ಲೂಕು ನೀಲಸಂದ್ರ ಗ್ರಾಮದ ಸರ್ವೆ ನಂ.79ರ 15-12 ಎಕರೆ/ಗುಂಟೆ ಜಮೀನಿನಲ್ಲಿನ ಒತ್ತುವರಿಯನ್ನು ಗುರುತಿಸಲು ಜಂಟಿ ನಕ್ಷೆ ತಯಾರಿಸಿದ್ದು, ಅದರಂತೆ ಸದರಿ ಸರ್ವೆ ನಂಬರ್‌ನಲ್ಲಿ ಸುಮಾರು 216 ಮಂದಿ ಅನಧಿಕೃತದಾರರ ಮನೆಗಳನ್ನು ತೆರವುಗೊಳಿಸುವ ಕುರಿತು ಕರ್ನಾಟಕ ಭೂ ಕಬಳಿಕೆ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ (ನಕ್ಷೆ ಲಗತ್ತಿಸಿದೆ).

- ಪ್ರಶ್ನಿತ ಜಮೀನಿನಲ್ಲಿ ಈ ಹಿಂದೆ ಇದ್ದ 216 ಅನಧಿಕೃತದಾರರ ಜೊತೆ ಹೊಸದಾಗಿ 13 ಜನ ಒತ್ತುವರಿದಾರರನ್ನು ಗುರುತಿಸಿದ್ದು, 229 ಜನ ಅನಧಿಕೃತದಾರರ ಪೈಕಿ 13 ಜನ ಅನಧಿಕೃತದಾರರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆಯನ್ನು ದಿನಾಂಕ:04.11.2020 ರಂದು ದಾಖಲು ಮಾಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

- ಸದರಿ ಅನಧಿಕೃತ ಮನೆಗಳನ್ನು ತೆರವುಗೊಳಿಸುವ ಕುರಿತು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ದೇವಾಲಯದ ಪರವಾಗಿ ಖಾಸಗಿ ವಕೀಲರನ್ನು ನೇಮಕಾತಿ ಮಾಡಲಾಗಿರುತ್ತದೆ.

- ಒಟ್ಟು 229 ಅನಧಿಕೃತದಾರರ ಪೈಕಿ ಮೊದಲಿಗೆ 6 ಜನ ಅನಧಿಕೃತದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಪ್ರಸಕ್ತ 15 ಜನರ ವಿರುದ್ಧ ದಿನಾಂಕ:28.11.2023 ರಂದು ಕರ್ನಾಟಕ ಭೂ-ಕಬಳಿಕೆ ನಿಷೇಧ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು, ಉಳಿದ ಒತ್ತುವರಿದಾರರ ವಿರುದ್ಧ ಪ್ರಕರಣ ದಾಖಲಿಸಲು ಕ್ರಮವಹಿಸಲಾಗಿರುತ್ತದೆ. ಈಗಾಗಲೇ ದಾಖಲಾಗಿರುವ ಪ್ರಕರಣಗಳ ವಿಚಾರಣೆಯು ಈ ಕೆಳಕಂಡ ದಿನಾಂಕಗಳಂದು ನಿಗಧಿಯಾಗಿರುತ್ತದೆ.

| ಕ್ರ. ಸಂ. | ಪ್ರಕರಣ ಸಂಖ್ಯೆ ಮತ್ತು ವಾದಿ/ ಪ್ರತಿವಾದಿಗಳ ವಿವರ | ನಿಗಧಿಯಾದ ದಿನಾಂಕ |
|---|---|---|
| 1. | ಎಲ್.ಜಿಸಿ (ಜಿ) ನಂ.425/2021<br>ಶ್ರೀ ಧರ್ಮರಾಯಸ್ವಾಮಿ ದೇವಾಲಯ V/S<br>ಶ್ರೀ ಸೋಮಶೇಖರ್ ಬಿನ್ ಶ್ಯಾಮ್ | 11.01.2024 |
| 2. | ಎಲ್.ಜಿಸಿ (ಜಿ) ನಂ.428/2021<br>ಶ್ರೀ ಧರ್ಮರಾಯಸ್ವಾಮಿ ದೇವಾಲಯ V/S<br>ಶ್ರೀ ಕೆ.ಯಲ್ಲಪ್ಪ ಬಿನ್ ಕೃಷ್ಣಪ್ಪ | 11.01.2024 |
| 3. | ಎಲ್.ಜಿಸಿ (ಜಿ) ನಂ.424/2021<br>ಶ್ರೀ ಧರ್ಮರಾಯಸ್ವಾಮಿ ದೇವಾಲಯ V/S<br>ಶ್ರೀ ಮುನಿರಾಜು | 11.01.2024 |
| 4. | ಎಲ್.ಜಿಸಿ (ಜಿ) ನಂ.426/2021<br>ಶ್ರೀ ಧರ್ಮರಾಯಸ್ವಾಮಿ ದೇವಾಲಯ V/S<br>ಶ್ರೀ ರಾಜ ಬಿನ್ ಮುನಿಯಪ್ಪಗೌಡ | 11.01.2024 |
| 5. | ಎಲ್.ಜಿಸಿ (ಜಿ) ನಂ.427/2021<br>ಶ್ರೀ ಧರ್ಮರಾಯಸ್ವಾಮಿ ದೇವಾಲಯ V/S | 11.01.2024 |
| 6. | ಎಲ್.ಜಿಸಿ (ಜಿ) ನಂ.163/2022<br>ಶ್ರೀ ಧರ್ಮರಾಯಸ್ವಾಮಿ ದೇವಾಲಯ ಮತ್ತು ಇನ್ನೊಬ್ಬರು. | 11.01.2024 |

- ಉಳಿದ 224 ಜನ ಅನಧಿಕೃತದಾರರ ವಿರುದ್ಧ ಕರ್ನಾಟಕ ಸಾರ್ವಜನಿಕರ ಆವರಣಗಳ (ಅಧಿಭೋಗದಾರರನ್ನು ಹೊರ ಹಾಕುವ) ಅಧಿನಿಯಮ 1974ರಡಿಯಲ್ಲಿ ಮೊದಲಿಗೆ 15 ಜನರ ವಿರುದ್ಧ ದಿನಾಂಕ:28-11-2023ರಂದು ಪ್ರಕರಣವನ್ನು ದಾಖಲಿಸಿದ್ದು, ಪ್ರಕರಣ ಸಂಖ್ಯೆ ಬಂದಿರುವುದಿಲ್ಲ. ಇನ್ನುಳಿದ 209 ಜನರ ವಿರುದ್ಧ ಪ್ರಕರಣವನ್ನು ದಾಖಲಿಸಲು ಕ್ರಮ ವಹಿಸಲಾಗುತ್ತಿದೆ.

- ಪ್ರಸ್ತುತ ಒತ್ತುವರಿ ತೆರವುಗೊಳಿಸಿರುವ 9 ಎಕರೆ ಜಮೀನಿಗೆ ಕಾಂಪೌಂಡ್ ನಿರ್ಮಿಸಲು ರೂ.80.00 ಲಕ್ಷಗಳ ಅಂದಾಜುಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಕಾಮಗಾರಿಯನ್ನು ಕೆ.ಆರ್.ಡಿ.ಎಲ್ ರವರಿಗೆ ವಹಿಸಲಾಗಿರುತ್ತದೆ. ಸದರಿ ಕಾಮಗಾರಿಯು 1/3 ಭಾಗದ ಮೊದಲನೇ ಕಂತಿನ ಬಾಬ್ತು ರೂ.20.00ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ದಿನಾಂಕ:15.04.2017ರಂದು ಕೆ.ಆರ್.ಡಿ.ಎಲ್.ಗೆ ಬಿಡುಗಡೆ ಮಾಡಿರುತ್ತಾರೆ.

- ಪ್ರಸ್ತಾಪಿತ ಸ್ಥಳವನ್ನು ಮೋಜಣಿದಾರರು ಸರ್ವೆ ಮಾಡಿ ತಯಾರಿಸಿರುವ ನಕ್ಷೆಯಲ್ಲಿ ತೋರಿಸಿರುವಂತೆ ಕಾಂಪೌಂಡ್ ನಿರ್ಮಾಣ ಮಾಡಬೇಕಾಗಿರುವ ಸ್ಥಳವನ್ನು ಭೂ ಹಸ್ತಾಂತರ ಪತ್ರದ ಮೂಲಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಡಿ.ಎಲ್ ಸಂಸ್ಥೆ ಇವರಿಗೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು ದಿನಾಂಕ:28.02.2019ರಂದು ಜಮೀನನ್ನು ಹಸ್ತಾಂತರಿಸಿರುತ್ತಾರೆ.

- ಜಮೀನಿನ ಸಂರಕ್ಷಣೆಗಾಗಿ ಕಾಂಪೌಂಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳುವ ಕುರಿತು ಆಡಳಿತಾತ್ಮಕ ಮಂಜೂರಾತಿ ನೀಡಿ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಡಿ.ವಿ.ಎಸ್ (ಎ)ಸಿಆರ್.10/1989-90 ದಿನಾಂಕ:12.11.2020ನ್ನು ಪ್ರಶ್ನಿಸಿ, ಶ್ರೀ ತಾಯಪ್ಪ ಎಂಬುವವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:13506/2020ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಯಥಾಸ್ಥಿತಿಯನ್ನು ಕಾಪಾಡಲು ಮಧ್ಯಂತರ ಆದೇಶವನ್ನು ನೀಡಿರುತ್ತದೆ. ಸದರಿ ಪ್ರಕರಣದಲ್ಲಿ ಈಗಾಗಲೇ ಲಿಖಿತ ಆಕ್ಷೇಪಣೆಗಳನ್ನು ಹಾಗೂ ಅಗತ್ಯ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಈ ಪ್ರಕರಣವನ್ನು ದೇವಾಲಯದ ಪರವಾಗಿ ಇತ್ಯರ್ಥ ಪಡಿಸುವ ಕುರಿತು ಅಗತ್ಯ ಕ್ರಮ ವಹಿಸಲಾಗಿದೆ.

- ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂ.79ಕ್ಕೆ ಸೇರಿದ ಸ್ವತ್ತಿನಲ್ಲಿ ಅನಧಿಕೃತವಾಗಿ ಸ್ವಾಧೀನದಲ್ಲಿರುವ ಅತಿಕ್ರಮಣದಾರರನ್ನು ಹೊರ ಹಾಕಲು ಅಗತ್ಯವಿರುವ ಕ್ರಮ ಕೈಗೊಳ್ಳಲಾಗಿದ್ದು, ಪ್ರಮುಖವಾಗಿ ದೇವಾಲಯಕ್ಕೆ ಸೇರಿದ 4 ಎಕರೆ 32 ಗುಂಟೆಗೆ ಸ್ವತ್ತಿನ ಹಕ್ಕುದಾರಿಕೆಗೆ ಸಂಬಂಧಿಸಿದಂತೆ ಶ್ರೀ ಮುನಿಸ್ವಾಮಿ ಮತ್ತು ಇತರರು ಉಚ್ಚ ನ್ಯಾಯಾಲಯದಲ್ಲಿ ದಾಖಲ್ಮಾಡಿದ ಪ್ರಕರಣ ಸಂ: ಆರ್.ಎಫ್.ಎ 1702/2006ರ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:30.11.2022ರಂದು ವಜಾಗೊಳಿಸಿರುತ್ತದೆ. ಸದರಿ ತೀರ್ಪಿನ ಮೇಲೆ ಅಪೀಲುದಾರರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಏಕಪಕ್ಷೀಯವಾಗಿ ತಡೆಯಾಜ್ಞೆ ಪಡೆಯುವುದನ್ನು ತಪ್ಪಿಸುವ ಸಲುವಾಗಿ ದೇವಾಲಯದ ವತಿಯಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಕೇವಿಯಟ್ ಅರ್ಜಿಯನ್ನು ದಾಖಲಿಸಲಾಗಿದೆ.

.....5

- ಮಾನ್ಯ ಉಚ್ಚ ನ್ಯಾಯಾಲಯವು ಆರ್.ಎಫ್.ಎ ಪ್ರಕರಣ ಸಂ:1702/2006ರಲ್ಲಿ ದೇವಾಲಯದ ಪರವಾಗಿ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ:13506/2020ನ್ನು ಕೂಡ ವಜಾಗೊಳಿಸಲು ಕೋರಿ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಮೆಮೋ ಅರ್ಜಿಯನ್ನು ದಾಖಲಿಸಲಾಗಿದೆ.

- ದೇವಾಲಯಕ್ಕೆ ಸೇರಿದ ಸರ್ವೆ ನಂ.79ರ ಸ್ವತ್ತಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ಎಫ್ಎ ನಂ:1702/2006 ಮತ್ತು ರಿಟ್ ಅರ್ಜಿ ಸಂ:13506/2020ರ ಪ್ರಕರಣಗಳು ದಾಖಲಾಗಿದ್ದು, ಆರ್ಎಫ್ ಎ ಸಂ:1702/2006ರ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:30.11.2022ರಂದು ವಜಾಗೊಳಿಸಿದ್ದು, ಸದರಿ ಸ್ವತ್ತು ಸೇರಿದಂತೆ ದೇವಾಲಯದ ಸ್ವತ್ತಿನ ಸಂರಕ್ಷಣೆಗಾಗಿ ಕಾಂಪೌಂಡ್ ಗೋಡೆಯನ್ನು ನಿರ್ಮಿಸಬೇಕಾಗಿರುತ್ತದೆ. ಆದರೆ ಕಾಂಪೌಂಡ್ ಗೋಡೆ ನಿರ್ಮಿಸುವ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುವ ಜಿಲ್ಲಾಧಿಕಾರಿಯವರ ಆದೇಶದ ಬಗ್ಗೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಮಾನ್ಯ ಉಚ್ಚ ನ್ಯಾಯಾಲವು ರಿಟ್ ಅರ್ಜಿ ಸಂ:13506/2020ರ ಪ್ರಕರಣವನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಕ್ರಮ ವಹಿಸಲಾಗಿರುತ್ತದೆ.

- ಸರ್ವೆ ನಂ.79ರ ಸ್ವತ್ತಿಗೆ ಸಂಬಂಧಿಸಿದಂತೆ ಒತ್ತುವರಿದಾರರನ್ನು ತೆರವುಗೊಳಿಸುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪ್ರಶ್ನಿತ ಸ್ವತ್ತಿಗೆ ಮುಂದೆ ಯಾವುದೇ ಖಾತೆಯನ್ನು ಮಾಡದಂತೆ ಬೃಹತ್ ಬೆಂಗಳೂರು ಮಹಾಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ, (ಶಾಂತಿನಗರ) ಉಪವಿಭಾಗ, ಬೆಂಗಳೂರು ಇವರಿಗೆ ತಿಳಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಪಾಲಿಕೆ ವತಿಯಿಂದ ಪ್ರಶ್ನಿತ ಸ್ವತ್ತಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಯಾವುದೇ ಖಾತೆ ಮಾಡುವುದಿಲ್ಲವೆಂದು ಸಹಾಯಕ ಕಂದಾಯ ಅಧಿಕಾರಿ, (ಶಾಂತಿನಗರ) ಉಪವಿಭಾಗ, ಬಿ.ಬಿ.ಎಂ.ಪಿ, ಬೆಂಗಳೂರು ರವರು ದಿನಾಂಕ:03-02-2021ರ ಪತ್ರದಲ್ಲಿ ತಿಳಿಸಿರುತ್ತಾರೆ.

- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೆಸ್ಕಾಂ, ಆಸ್ಟಿನ್ ಟೌನ್ ರವರಿಗೆ ಪ್ರಸ್ತಾಪಿತ ಸರ್ವೆ ನಂಬರ್ ನಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಿರುವ ಮನೆ ಮತ್ತು ಮಳಿಗೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ, ಸಂಪರ್ಕ ನೀಡಿರುವ ಮಾಹಿತಿಗಳನ್ನು ನೀಡಲು ಹಾಗೂ ಇನ್ನು ಮುಂದೆ ಇಲಾಖಾ ಅನುಮತಿ ಪಡೆಯದೇ ಯಾವುದೇ ಮನೆ ಮತ್ತು ಮಳಿಗೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿಯ ವ್ಯವಸ್ಥೆಯ ಸಂಪರ್ಕ ನೀಡದಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಗೆ ತಿಳಿಸಲಾಗಿರುತ್ತದೆ.

......6

- ಪ್ರಶ್ನಿತ ಜಮೀನಿನಲ್ಲಿ ಸುಮಾರು 216 ಮನೆಗಳು, ಕಟ್ಟಡ, ಶೆಡ್‌ಗಳನ್ನು ಅನಧಿಕೃತದಾರರು ನಿರ್ಮಿಸಿದ್ದು, ಬಿಬಿಎಂಪಿ ಯಿಂದ ಯಾವುದೇ ಖಾತೆ ಇದ್ದಲ್ಲಿ, ಅದರ ಧೃಢೀಕೃತ ಪ್ರತಿಗಳನ್ನು ತ್ವರಿತವಾಗಿ ಸಲ್ಲಿಸುವಂತೆ ಮತ್ತು ಇನ್ನು ಮುಂದೆ ಸದರಿ ಜಮೀನಿಗೆ ಸಂಬಂಧಿಸಿದಂತೆ ಧಾರ್ಮಿಕ ದತ್ತಿ ಇಲಾಖೆಯ ಅನುಮತಿ ಇಲ್ಲದೇ ಯಾವುದೇ ಅನಧಿಕೃತ ಒತ್ತುವರಿದಾರರಿಗೆ ಹೊಸ ಖಾತೆಯನ್ನು ಮಾಡಬಾರದಾಗಿ ಕೋರಿ ಪ್ರಸ್ತಾಪಿತ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು ದಿನಾಂಕ:10-08-2020ರಂದು ಉಪ ನೋಂದಣಾಧಿಕಾರಿಗಳು, ಸುಧಾಮನಗರ (ಶಾಂತಿನಗರ), ಬೆಂಗಳೂರು ಇವರಿಗೆ ಪತ್ರ ಬರೆದಿರುತ್ತಾರೆ.

- ಪ್ರಸ್ತಾಪಿತ ದೇವಾಲಯಕ್ಕೆ ಸೇರಿದ ಸರ್ವೆ ನಂ.79 ರಲ್ಲಿ 15 ಎಕರೆ 12 ಗುಂಟೆ ಜಮೀನಿನಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸುವ ಮುನ್ನ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಅನುಮತಿ ಕೋರಿ ಅನಧಿಕೃತದಾರರು ಬಿ.ಬಿ.ಎಂ.ಪಿ ಪ್ರಾಧಿಕಾರಕ್ಕೆ ಸಲ್ಲಿಸಿರುವ ಎಲ್ಲಾ ಅಗತ್ಯ ದಾಖಲೆ ಮತ್ತು ಮಾಹಿತಿಗಳನ್ನು ನೀಡುವಂತೆ ಕೋರಿ ಆಯುಕ್ತರು / ಸಹಾಯಕ ಆಯುಕ್ತರಿಂದ ಮತ್ತು ಪ್ರಸ್ತಾಪಿತ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳಿಂದ 1) ಆಯುಕ್ತರು ಹಾಗೂ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು ರವರಿಗೆ ದಿನಾಂಕ:07-08-2020, 10-08-2020, 20-09-2021, 21-04-2022ರಂದು ವಿವಿಧ ದಿನಾಂಕಗಳಲ್ಲಿ ಹಲವಾರು ಪತ್ರ ಮತ್ತು ಅರೆಸರ್ಕಾರಿ ಪತ್ರಗಳನ್ನು ಬರೆಯಲಾಗಿರುತ್ತದೆ.

- ಪ್ರಸ್ತಾಪಿತ ದೇವಾಲಯಕ್ಕೆ ಸೇರಿದ ಸರ್ವೆ ನಂ.79ರಲ್ಲಿ 15 ಎಕರೆ 12 ಗುಂಟೆ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆಯುವ ಮುನ್ನ ಅನಧಿಕೃತದಾರರು ಅನುಮತಿ ಕೋರಿ ಬೆಸ್ಕಾಂ ರವರಿಗೆ ಸಲ್ಲಿಸಿರುವ ಎಲ್ಲಾ ಅಗತ್ಯ ದಾಖಲೆ ಮತ್ತು ಮಾಹಿತಿಗಳನ್ನು ನೀಡುವಂತೆ ಆಯುಕ್ತರ / ಸಹಾಯಕ ಆಯುಕ್ತರಿಂದ ಮತ್ತು ಪ್ರಸ್ತಾಪಿತ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳಿಂದ/ ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರ ,ಬೆಸ್ಕಾಂ, ಬೆಂಗಳೂರು ರವರಿಗೆ ದಿನಾಂಕ:10-08-2020, 16-09-2021, 22-09-2021 21-04-2022 ರಂದು ವಿವಿಧ ದಿನಾಂಕಗಳಲ್ಲಿ ಹಲವಾರು ಪತ್ರ ಮತ್ತು ಅರೆಸರ್ಕಾರಿ ಪತ್ರಗಳನ್ನು ಬರೆಯಲಾಗಿರುತ್ತದೆ.

.....7

- ಸದರಿ ಜಮೀನಿನಲ್ಲಿ ನಿರ್ಮಿಸಿರುವ ಮನೆಗಳಿಗೆ ನೀರು ಮತ್ತು ಒಳಚರಂಡಿ ಸಂಪರ್ಕ ಪಡೆಯುವ ಮುನ್ನ ಅನುಮತಿ ಕೋರಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರಿಗೆ, ಅನಧಿಕೃತದಾರರು ಸಲ್ಲಿಸಿರುವ ಎಲ್ಲಾ ಅಗತ್ಯ ದಾಖಲೆ ಮತ್ತು ಮಾಹಿತಿಗಳನ್ನು ನೀಡುವಂತೆ ಕೋರಿ ಆಯುಕ್ತರು ಹಾಗೂ ಸಹಾಯಕ ಆಯುಕ್ತರಿಂದ ಮತ್ತು ಪ್ರಸ್ತಾಪಿತ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಯಿಂದ ಮುಖ್ಯ ಅಭಿಯಂತರರು/ ಅಧೀಕ್ಷಕ ಇಂಜಿನಿಯರ್/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬೆಂಗಳೂರು ರವರಿಗೆ ದಿನಾಂಕ:10-08-2020, 16-09-2021, 22-09-2021, 21-04-2022 ರಂದು ವಿವಿಧ ದಿನಾಂಕಗಳಲ್ಲಿ ಹಲವಾರು ಪತ್ರ ಮತ್ತು ಅರೆಸರ್ಕಾರಿ ಪತ್ರಗಳನ್ನು ಬರೆಯಲಾಗಿರುತ್ತದೆ. ಅಲ್ಲದೇ ಇನ್ನು ಮುಂದೆ ಇಲಾಖಾ ಅನುಮತಿ ಪಡೆಯದೇ ಯಾವುದೇ ಮನೆ ಮತ್ತು ಮಳಿಗೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಸಂಪರ್ಕ ನೀಡದಂತೆ ತಿಳಿಸಲಾಗಿರುತ್ತದೆ.

- ಸರ್ಕಾರದಿಂದ ನೀಲಸಂದ್ರ ಗ್ರಾಮದ ಸರ್ವೆ ನಂ.79 ಹಾಗೂ ಹೊಂಗಸಂದ್ರ ಗ್ರಾಮದ ಸರ್ವೆ ನಂ.33ರ ಸ್ವತ್ತುಗಳನ್ನು ಸಂರಕ್ಷಿಸಿ ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ದಿಟ್ಟ ಕ್ರಮಗಳನ್ನು ಮಾನ್ಯ ನ್ಯಾಯಾಲಯಗಳ ಆದೇಶದನ್ವಯ ಕ್ರಮ ಕೈಗೊಳ್ಳಲಾಗಿದೆ ಹಾಗೂ ಒತ್ತುವರಿಯನ್ನು ತೆರವುಗೊಳಿಸಲು ಕಾನೂನು ರೀತ್ಯಾ ಸಕ್ಷಮ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲ್ಮಾಡಿದ್ದು ಒತ್ತುವರಿ ತೆರವಿಗೆ ದಿಟ್ಟ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಕಾನೂನು ಬಾಹಿರವಾಗಿ ಹಾಗೂ ನ್ಯಾಯಾಲಯದ ಆದೇಶಕ್ಕೆ ವಿರುದ್ಧವಾಗಿ ಅತಿಕ್ರಮಣದಾರರನ್ನು ಪ್ರೋತ್ಸಾಹಿಸಿರುವುದಿಲ್ಲ ಹಾಗೂ ಅತಿಕ್ರಮಣದಾರರನ್ನು ತೆರವುಗೊಳಿಸಲು ಇಲಾಖೆಯ ವತಿಯಿಂದ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

ಸಂಖ್ಯೆ: ಕಂಇ 140 ಮುಸಪ್ರ 2023.

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು.